# ಕರ್ನಾಟಕ ವಿಧಾನ ಸಭೆ

## KARNATAKA LEGISLATIVE ASSEMBLY

ಗಂರುವಾರ ದಿನಾಂಕ ೨೮ನೇ ಜನವರಿ ೧೯೮೮, ಮಾಘ, ೮, ೧೯೦೯, ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

**ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದ್ದರು.**

೧೧-೦೦ ಎ. ಎಂ.

### ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀಯುತ ಕೆ. ಆರ್. ಹೊನ್ನಪ್ಪನವರು ದಿನಾಂಕ ೨೫-೧-೮೮ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ಕಡೂರು ವಿಧಾನ ಸಭಾ ಕ್ಷೇತ್ರದಿಂದ ೫ನೇ ವಿಧಾನ ಸಭೆಗೆ ಆಯ್ಕೆಯಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ನಿಧನ ಹೊಂದಿದ ಸದಸ್ಯರು ಗೌರವದ ಅಂಗವಾಗಿ, ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಕಾಲ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬಕ್ಕೆ ಮಂಗಳಹಿಸಿಕೊಡಲಾಗುವುದು.

### ಪಂನವಿ

ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕರನ್ನು ಅಮಾನತ್ತಿನಲ್ಲಿಟ್ಟಿರುವುದನ್ನು ರಿಪೋರ್ಟ್ ಮಾಡುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ತಮ್ಮಲ್ಲಿ ಮನವಿ ಮಾಡಿಕೊಂಡಹಾಗೆ, ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಟಿ. ಎನ್. ನರಸಿಂಹಮೂರ್ತಿ ಅವರನ್ನು ಮತ್ತು ಸದಸ್ಯರಾದ ಶ್ರೀ ಡಿ. ಬಿ. ಕಲ್ಮಣಕರ್ ಅವರು ಜನರಿಗೆ ನೇರವಾಗಿ ಸಂಬಂಧಪಡುವ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿ, ಈ ವಿಷಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದಾಗ, ಕೆಲವೊಂದು ವಿಷಾದನೀಯ ಘಟನೆ ನಡೆಯಿತು...

ಅಧ್ಯಕ್ಷರು.—ಅದರ ಮೆರಿಟ್ಸ್‌ಗೆ ತಾವು ಹೋಗಬೇಡಿ, ಏನಾಗಿದೆ, ಏನಾಗಬೇಕು ಅಷ್ಟನ್ನು ಮಾತ್ರ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಹುಶಃ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರಿಗೂ ಕೂಡಾ ಜನರ ಹೇಳಿಕೆಯನ್ನು, ಅನಿಸಿಕೆಗಳನ್ನು ಈ ಸದನದ ಹಾಗೂ ಆ ಸದನದ ಮುಂದಿಡತಕ್ಕಂಥ ಅಧಿಕಾರ ಇದೆ, ಇದು ಅವರ ಆದ್ಯ ಕರ್ತವ್ಯ. ಆದರ ಪ್ರಕಾರ ಅವೊತ್ತು ಅಲ್ಲಿ ವಿರೋಧ ಪಕ್ಷದ ನಾಯಕರು, ಜನರ ಕಷ್ಟ ನಷ್ಟಗಳನ್ನು ಹೇಳುತ್ತಿರುವಾಗ

(ಮುಂದಲ)